# ಚೀಫ್ ಮೌಸರ್



■ ಪ್ರವೀಣ ಕುಲಕರ್ಣಿ

ಈತ ಸೀದಾ ಬ್ರಿಟನ್ ಪ್ರಧಾನಿಯವರ ತೊಡೆಯೇರಿ ಅಲ್ಲಿಯೇ ಮಲಗಿ, ನಿದ್ದೆ ಮಾಡಬಲ್ಲ. ಅವರ ಅಧಿಕೃತ ನಿವಾಸ '10, ಡೌನಿಂಗ್ ಸ್ಟ್ರೀಟ್'ನಲ್ಲೇ ಈತನದೂ ವಾಸ. ಅಲ್ಲಿಗೆ ಭೇಟಿ ನೀಡುವ ಬರಾಕ್ ಒಬಾಮಾ ಅವರಂತಹ ವಿಶ್ವ ನಾಯಕರ ತೋಳಿನಲ್ಲಿ ಕುಳಿತು ಛಾಯಾಚಿತ್ರಕ್ಕೂ ಪೋಸು ನೀಡಬಲ್ಲ. ಡೌನಿಂಗ್ ಸ್ಟ್ರೀಟ್‌ನಲ್ಲಿ ಬೇಟೆಯಾಡುವ ವಿಶೇಷ ಅನುಮತಿಯನ್ನು ಹೊಂದಿದ ಏಕೈಕ ಪಡೆಯ ಮುಖ್ಯಸ್ಥ ಎಂಬ ಗರಿಮೆ ಬೇರೆ ಈತನಿಗೆ. ಹೆಸರು ಲ್ಯಾರಿ. ಸದ್ಯ ನಿರ್ವಹಿಸುತ್ತಿರುವ ಹುದ್ದೆಯ ಹೆಸರು 'ಚೀಫ್ ಮೌಸರ್ ಟು ದಿ ಕ್ಯಾಬಿನೆಟ್ ಆಫೀಸ್' (ಕ್ಯಾಬಿನೆಟ್ ಕಚೇರಿಯ ಇಲಿ ಹಿಡಿಯುವ ಪಡೆಯ ಮುಖ್ಯಸ್ಥ). ಇಷ್ಟು ಹೇಳಿದ ಮೇಲೆ ನಿಮಗೆ ಈತನೊಬ್ಬ ಗಂಡು ಬೆಕ್ಕು ಎಂದು ಗೊತ್ತಾಗಿರಬೇಕಲ್ಲ?

ಹೌದು, 2011ರಿಂದಲೂ 'ಚೀಫ್ ಮೌಸರ್' ಆಗಿ ಕಾರ್ಯ ನಿರ್ವಹಿಸುತ್ತಿರುವ ಲ್ಯಾರಿ, '10, ಡೌನಿಂಗ್ ಸ್ಟ್ರೀಟ್'ನಲ್ಲಿ ಈ ಸೇವೆಗೆ ಸೇರಿ ಇದೀಗ ಹತ್ತು ವರ್ಷಗಳನ್ನು ಪೂರ್ಣಗೊಳಿಸಿದ್ದಾನೆ. ಬ್ರಿಟನ್‌ನ ಮೂವರು ಪ್ರಧಾನಿಗಳ ಕಾಲಾವಧಿಯಲ್ಲಿ (ಡೇವಿಡ್ ಕ್ಯಾಮರೂನ್, ಥೆರೆಸಾ ಮೇ ಹಾಗೂ ಬೋರಿಸ್ ಜಾನ್ಸನ್) ಕೆಲಸ ಮಾಡಿದ ಶ್ರೇಯ ಅವನದಾಗಿದೆ. ಅಂದಹಾಗೆ, ಆತ ಪ್ರಧಾನಿಯವರ ನಿವಾಸ ಸೇರುವ ಮುನ್ನ ಪ್ರಾಣಿಗಳ ಅನಾಥಾಲಯ 'ಬೆಟರ್‌ಸೀ ಡಾಗ್ಸ್ ಅಂಡ್ ಕ್ಯಾಟ್ಸ್ ಹೋಮ್'ನಲ್ಲಿದ್ದ.

'ಚೀಫ್ ಮೌಸರ್'ನ ಅಧಿಕೃತ ಕರ್ತವ್ಯಗಳ ಕುರಿತು ಕ್ಯಾಬಿನೆಟ್ ಕಚೇರಿ ಕೊಡುವ ವಿವರಣೆ ಕುತೂಹಲಕಾರಿಯಾಗಿದೆ. '10, ಡೌನಿಂಗ್ ಸ್ಟ್ರೀಟ್'ಗೆ ಆಗಮಿಸುವ ಅತಿಥಿಗಳನ್ನು ಸ್ವಾಗತಿಸುವುದು, ಭದ್ರತಾ ವ್ಯವಸ್ಥೆಯನ್ನು ತಪಾಸಿಸುವುದು, ಪೀಠೋಪಕರಣಗಳಲ್ಲಿ ನಿದ್ರೆ ಮಾಡುವಷ್ಟು ಅವುಗಳು ಗುಣಮಟ್ಟದಿಂದ ಕೂಡಿವೆಯೇ ಎನ್ನುವುದನ್ನು ಪರಿಶೀಲಿಸುವುದು ಮತ್ತು ಇಲಿಗಳ ಹಾವಳಿಯನ್ನು ನಿಯಂತ್ರಿಸುವುದು 'ಚೀಫ್ ಮೌಸರ್'ನ ಕೆಲಸವಂತೆ. 1929ರಲ್ಲಿಯೇ ಈ ಹುದ್ದೆಯನ್ನು ಸೃಜಿಸಲಾಗಿದ್ದು, ಲ್ಯಾರಿಯ ಪೂರ್ವಸೂರಿಗಳೆಲ್ಲ ಈ ಕರ್ತವ್ಯವನ್ನು ಚಾಚೂತಪ್ಪದೆ ನಿಭಾಯಿಸುತ್ತಾ ಬಂದಿದ್ದಾರೆ.

ಈ ಎಲ್ಲ ಕೆಲಸಗಳನ್ನು ಮಾಡುವ ಜತೆಗೆ ನಿಧಿ ಸಂಗ್ರಹದಂತಹ ಸಾಮಾಜಿಕ ಕಾರ್ಯಗಳಲ್ಲೂ ಲ್ಯಾರಿ ಭಾಗವಹಿಸುತ್ತಿರುವುದು ವಿಶೇಷ.

ಪ್ರಧಾನಿಗಳ ನಿವಾಸದಲ್ಲಿ ಈತನ ಮೊದಲ ಅಧಿಕೃತ ಬೇಟೆ 2011ರ ಏಪ್ರಿಲ್ 22ರಂದು ನಡೆದಿದೆ ಎಂದು ದಾಖಲಾಗಿದೆ. 2012ರ ಆಗಸ್ಟ್ 28ರಂದು ಈತ ಸಾರ್ವಜನಿಕವಾಗಿಯೇ ಬೇಟೆಯಾಡಿ ಮಾಧ್ಯಮದ ಗಮನಸೆಳೆದಿದ್ದ. ಪ್ರತಿಷ್ಠಿತ ನಿವಾಸದಲ್ಲಿ ಕಂಡ ಇಲಿಯನ್ನು ಹೊರಗಿನ ಹುಲ್ಲುಹಾಸಿನವರೆಗೆ ಅಟ್ಟಾಡಿಸಿಕೊಂಡು ಬಂದ ಲ್ಯಾರಿ, ಅದಕ್ಕೆ ಬಿಲದಲ್ಲಿ ಅಡಗಲು ಅವಕಾಶ ನೀಡದೆ, ಹುಲ್ಲುಹಾಸಿನ ಮೇಲೆಯೇ ಬೇಟೆಯಾಡಿದ್ದ. ಒಮ್ಮೆ ಪ್ರಧಾನಿ ಕಚೇರಿಯ ಅಧಿಕಾರಿಯೊಬ್ಬರು ಕ್ಯಾಬಿನೆಟ್ ಕಚೇರಿಯಲ್ಲಿ ಇಲಿಯೊಂದನ್ನು ಹಿಡಿದು ಕಂದುಬಣ್ಣದ ಸ್ಯಾಂಡ್‌ವಿಚ್ ಬ್ಯಾಗ್‌ನಲ್ಲಿ ಹಾಕುತ್ತಿರುವ ಚಿತ್ರ ಮಾಧ್ಯಮಗಳಿಗೆ ಸಿಕ್ಕಿತ್ತು. 'ಚೀಫ್ ಮೌಸರ್'ನ ಕೆಲಸವನ್ನು ಈ ಅಧಿಕಾರಿ ವಹಿಸಿಕೊಂಡಿದ್ದಾರೆ ಎಂಬ ಕುಹಕದ ಶೀರ್ಷಿಕೆಯೊಂದಿಗೆ ಆ ಚಿತ್ರವನ್ನು ಪ್ರಕಟಿಸಿದ್ದವು.

ಲ್ಯಾರಿ ಸದ್ದು ಮಾಡಿದ್ದು ಪ್ರಧಾನಿಯವರ ನಿವಾಸದಲ್ಲಿ ಮಾತ್ರವಲ್ಲ. ಬ್ರಿಟನ್‌ನ ಸಂಸತ್ತಿನಲ್ಲೂ ಆತನ ಕುರಿತು ಚರ್ಚೆಯಾಗಿದೆ. ಡೇವಿಡ್ ಕ್ಯಾಮರೂನ್ ಅವರು ಪ್ರಧಾನಿಯಾಗಿ ಸಂಸತ್ತಿಗೆ ಕೊನೆಯ ಉತ್ತರ ಈ ಬೆಕ್ಕಿನ ಕುರಿತಾದದ್ದೇ. 'ನನ್ನ ರಾಜೀನಾಮೆ ನಂತರವೂ ಲ್ಯಾರಿ ಸ್ಥಾನದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಆತನೊಬ್ಬ ನಾಗರಿಕ ಸೇವಕ. ಹೊಸ ಪ್ರಧಾನಿಯವರ ಆಡಳಿತದಲ್ಲೂ ಅದೇ ಹುದ್ದೆಯಲ್ಲಿ ಮುಂದುವರಿಯಲಿದ್ದಾನೆ' ಎಂದು ಕ್ಯಾಮರೂನ್ ಹೇಳಿದ್ದರು.

ಲ್ಯಾರಿಯ ತುಪ್ಪಳ ಒಮ್ಮೆ ಪ್ರಧಾನಿಯವರ



ಹೊಸ ಸೂಟ್ ಅನ್ನು ಹಾಳು ಮಾಡಿತ್ತು. ಆಗ ಅವರ ಕೋಣೆಯನ್ನು ಪ್ರವೇಶಿಸದಂತೆ ಕೆಲವು ದಿನ ಆತನಿಗೆ ನಿರ್ಬಂಧ ವಿಧಿಸಲಾಗಿತ್ತು. ಆದರೆ, 'ಮಿಯಾಂವ್, ಮಿಯಾಂವ್' ಎನ್ನುತ್ತಾ ಪ್ರಧಾನಿಗೆ ದೂರು ಒಯ್ದ ಲ್ಯಾರಿ, ಅವರ ಕೋಣೆಯಲ್ಲೂ ಪ್ರವೇಶ ಗಿಟ್ಟಿಸಲು ಯಶಸ್ವಿಯಾದ. 'ಪ್ಯಾಲೇಸ್ ಆಫ್ ವೆಸ್ಟ್ ಮಿನಿಸ್ಟರ್ಸ್'ನಲ್ಲಿ ಇಲಿಗಳ ಹಾವಳಿ ಅತಿಯಾದಾಗ ಅದನ್ನು ನಿಯಂತ್ರಿಸುವಂತೆಯೂ ಮನವಿ ಬಂದಿದ್ದು ಇದೇ 'ಚೀಫ್ ಮೌಸರ್'ಗೆ. ಆದರೆ, ಈತ ಹೇಗೆ ಅಲ್ಲಿನ ಇಲಿಗಳ ಹಾವಳಿಯನ್ನು ನಿಯಂತ್ರಿಸಿದ ಎಂಬ ವಿವರವನ್ನು ಆತನಿಗೆ ಮನವಿ ಸಲ್ಲಿಸಿದ್ದ ಗೃಹ ಕಾರ್ಯದರ್ಶಿಗಳು ಕೊಡುವುದಿಲ್ಲ.

'10, ಡೌನಿಂಗ್ ಸ್ಟ್ರೀಟ್'ಗೆ ವಿದೇಶಿ ಗಣ್ಯರು ಬಂದಾಗಲೆಲ್ಲ ಲ್ಯಾರಿ ಇರಲೇಬೇಕು. ಬರಾಕ್ ಒಬಾಮಾ ಅವರಂತೂ ಆತನ ಬೆನ್ನುತಟ್ಟಿ ತೆಗೆಸಿಕೊಂಡ ಫೋಟೊ ಈ ಪ್ರತಿಷ್ಠಿತ ನಿವಾಸದ ಆಲ್ಬಂನಲ್ಲಿ ರಾರಾಜಿಸುತ್ತಿದೆ. ಡೊನಾಲ್ಡ್ ಟ್ರಂಪ್, ಕುಟುಂಬದೊಂದಿಗೆ ಈ ಮನೆಯ ಮುಂದೆ ಫೋಟೊ ತೆಗೆಸಿಕೊಂಡಾಗ ಆ ಫ್ರೇಮ್‌ನಲ್ಲಿ ಲ್ಯಾರಿಗೂ ಜಾಗ ಸಿಕ್ಕಿದೆ. ಹಾಗೆಂದ ಮಾತ್ರಕ್ಕೆ ರಾಜಮರ್ಯಾದೆ ಗಿಟ್ಟಿಸುತ್ತಿರುವ ಈತ ವಿವಾದದಿಂದ ಹೊರತಾಗಿದ್ದಾನೆ ಎಂದೇನೂ ತಿಳಿಯಬೇಕಿಲ್ಲ. ಪ್ರಧಾನಿಯವರ ನಿವಾಸದ ಮುಂದೆ ಪಾರಿವಾಳವೊಂದನ್ನು ಬೇಟೆಯಾಡಲು ಹೋಗಿ, ಜನರ ಕೋಪಕ್ಕೆ ತುತ್ತಾಗಿದ್ದ. ಗಾಯಗೊಂಡರೂ ಪಾರಿವಾಳ ಜೀವ ಉಳಿಸಿಕೊಂಡು ಹಾರಿ ಹೋಗಿದ್ದರಿಂದ ಜನಾಕ್ರೋಶ ತಣ್ಣಗಾಗಿತ್ತು. ಪ್ರಧಾನಿ ನಿವಾಸದಲ್ಲಿ ಈಗ ಯಥಾಪ್ರಕಾರ ಆತನ ಕಾರುಬಾರು ಮುಂದುವರಿದಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65